ಎಲೆ, ಲೋಟಗಳನ್ನು ಬಯಲಿಗೆ ಎಸೆದಿದ್ದೆವು. ಆ ಎಲೆ, ಲೋಟಗಳ ಸುತ್ತ ಡಜನ್‌ಗಟ್ಟಲೆ ಮಂದಿ ಮುಗಿಬಿದ್ದು ನೆಕ್ಕುತ್ತಿದ್ದರು. ದಿಟ! ಅವರೂ ಮನುಷ್ಯರೆ, ದೇವರ ಸ್ವರೂಪ ಅವರೂ ಸಹ. ಅಲ್ಲಿ ಎಸೆದ ತಿಂದುಂಡ ಎಲೆಗಳನ್ನು ಸಾಕಷ್ಟು ನಾಯಿಗಳು ನೆಕ್ಕುತ್ತಿದ್ದವು. ಆ ನಿರ್ಗತಿಕ ಮಂದಿ ತಮ್ಮ ಪ್ರತಿಸ್ಪರ್ಧಿ ಆ ನಾಯಿಗಳನ್ನು ಅಟ್ಟಾಡಿಸಿ ಓಡಿಸುತ್ತಿದ್ದರು. ನಾಯಿಗಿಂತಲೂ ಹೀನಾಯ ಬಾಳು ಅವರದ್ದಿತ್ತು. ಅಲ್ಲಿಯ ಭಯಂಕರ ದೃಶ್ಯ ನನ್ನಲ್ಲಿ ನಡುಕ ಹುಟ್ಟಿಸಿ ಕಣ್ಣಲ್ಲಿ ಧಾರಾಕಾರ ನೀರು ಹರಿಯುವಂತೆ ಮಾಡಿತು. 'ಓ ದೇವರೆ! ಇವರೂ ಕೂಡ ನಮ್ಮ ಅಣ್ಣತಮ್ಮಂದಿರೆ, ಅಕ್ಕತಂಗಿಯರೆ, ನಮ್ಮ ಆತ್ಮಗಳೇ, ಎಂತಾ ಭಯಾನಕ, ಹೀನಾಯ ಸ್ಥಿತಿ ಅವರದೂ!' ನಾನು ತತ್‌ಕ್ಷಣವೇ ಸೇವಕಿಯನ್ನು ಕಳಿಸಿ ಅವರನ್ನೆಲ್ಲ ಒಳಗೆ ಬರಲು ಹೇಳಿ ಅತಿಥಿಗಳಿಗೆಂದು ಮಾಡಿಟ್ಟಿದ್ದ ಸಿಹಿಖಾದ್ಯ ಪೂರಿಪಲ್ಯೆಗಳನ್ನೆಲ್ಲ ತಿನ್ನುಣ್ಣಲು ಕೊಟ್ಟೆ, ಸೇವಕಿ ನನ್ನ ಪತಿಯನ್ನು ನೆನೆದು ಥರಗುಟ್ಟುತ್ತಿದ್ದಳು, ಭಯಗ್ರಸ್ತಳಾಗಿದ್ದ ಅವಳಿಗೆ ನಾನು ಧೈರ್ಯ ತುಂಬಿದೆ. ಅವಳೊಂದು ಚೂರು ಧೈರ್ಯಸ್ಥಳಾದಳು ಈಗ.

ಆ ಹಸಿದ ಬಡಪಾಯಿಗಳು ಉಣ್ಣುತ್ತಿರುವಾಗಲೇ ನನ್ನ ಪತಿ ಮನೆಗೆ ಬಂದರು. ಅವರ ಮುಖದಲ್ಲಿ ಈಗ ಕೆಂಪಡರಿತ್ತು. ಬುಸುಗುಡುತ್ತ 'ಅಫೀಮು, ಗಾಂಜಾ ಏನಾದರೂ ಸೇವಿಸಿದ್ದೀಯಾ? ಒಂದಲ್ಲ ಒಂದು ತಾಪತ್ರಯ ತಂದಿಕ್ಕುತ್ತಿರುವಿಯಲ್ಲ ನನಗೆ ಒಂದೇ ಸಮನೆ ಬಿಟ್ಟು ಬಿಡದಂಗೆ. ನನಗಂತೂ ಅರ್ಥ ಆಗ್ತಿಲ್ಲ ನಿಮಗೇನಾಗಿದೆ ಅಂತ. ಖಾದ್ಯಗಳನ್ನು ಈ ಅಲೆಮಾರಿಗಳಿಗಾ ನಾನು ಮಾಡಿಸಿದ್ದು? ಅವುನ್ನೆಲ್ಲ ತುಪ್ಪ, ಸಕ್ಕರೆ ಪರಿಶುದ್ಧ ಹಿಟ್ಟಿನಿಂದ ಮಾಡಿಸಿದೆ, ಈ ದಿನಗಳಲ್ಲಿ ಅವುಗಳಿಗೆ ಮುತ್ತುಗಳ ಬೆಲೆ ಇದೆ. ಸಿಹಿಖಾದ್ಯ ತಯಾರಕರ ಕೂಲಿ ತುಂಬಾ ತುಂಬಾನೇ ಇದೆ. ಈ ಕಾಲದಲ್ಲಿ ಈ ಹೊಲಸು ಮಂದಿಗೆ ಸಿಹಿಖಾದ್ಯ ಬಡಿಸಿದ್ದೀ, ನಾವೀಗ ಬರುವ ಅತಿಥಿಗಳಿಗೆ ಏನು ಇಕ್ಕೋಣ? ನನ್ನ ಗೌರವನಾ ಹಾಳು ಮಾಡಲು ಟೊಂಕಕಟ್ಟಿ ನಿಂತಿರುವಂತಿದೆ ನೀನೀಗ?' ಎಂದರು.

ನಾನು ಗಂಭೀರವಾಗಿಯೇ ಹೇಳಿದೆ, 'ಸುಖಾಸುಮ್ಮನೆ ಕೋಪ ನೆತ್ತಿಗೇರಿದೆ ನಿಮಗೆ. ನಿಮ್ಮ ಸಿಹಿಖಾದ್ಯ ನಾನವರಿಗೆ ಬಡಿಸಿರುವೆ, ನಾನೀಗ ನಿಮಗೆ ಸಾಕು ಬೇಕೆನಿಸುವಷ್ಟು ಖಾದ್ಯಗಳನ್ನು ಖರೀದಿಸಿ ಕೊಡುವೆ. ಅವರು ತಿಂದುಂಡ ಎಂಜಲು ಎಲೆಗಳನ್ನು ನೆಕ್ಕುವುದನ್ನು ನನ್ನಿಂದ ನೋಡಲಾಗಲಿಲ್ಲ. ಬಡವರೂ ಸಹ ಮಾನವರೆ. ಎಲ್ಲರಲ್ಲೂ ಇರುವ ಆತ್ಮ ಅವರ ಅಸ್ತಿತ್ವದಲ್ಲೂ ಇದೆ ತಾನೆ?'ಎಂದೆ.

ನನ್ನ ಪತಿ ನಡುವೆ ಬಾಯಿ ಹಾಕಿ 'ಸಾಕು ನಿಲ್ಲಿಸು - ಎಲ್ಲರಲ್ಲೂ ಆತ್ಮ ಒಂದೇ ಇರೋದು ಅನ್ನೋ ನಿನ್ನ ಜೋಗುಳನಾ! ಆತ್ಮದ ಸಂರಕ್ಷಣೆ ನನ್ನಿಂದಲೇ, ನನ್ನ ಹೊರತು ಬೇರ್‍ಯಾರು ಇಲ್ಲ ಎಂಬ ಭಾವನೆ ನಿನ್ನದಾ? ಸಕಲ ಜೀವಾತ್ಮಗಳು ಸರಿಸಮಾನವಾಗಿ ಸಂತೃಪ್ತಿಯಿಂದ ಇರಬೇಕೆಂದು ಆ ದೇವರು ಇಚ್ಛಿಸಿದರೆ ಆತನನ್ನು ತಡೆದದ್ದಾರೂ ಏನು? ಸಕಲರನ್ನು ಒಂದೇ ದರ್ಜೆಯಲ್ಲಿ ಇರಿಸಬೇಕೆನ್ನುವ ಇರಾದೆಗೆ ಅಡ್ಡ ಬಂದವರಾರು ? ಸಮಾಜದಲ್ಲಿನ ಮೇಲುಕೀಳು ಎಂಬ ಭಿನ್ನತೆಗೆ ಅವನೇಕೆ ಸಮ್ಮತಿಸಿದ. ಅವನ ಆದೇಶ ಇಲ್ಲದೆ ಒಂದೇ ಒಂದು ಎಲೆ ಕೂಡ ಅಲುಗಾಡದೆಂದ ಮೇಲೆ ಇಂತಹ ಬೃಹತ್ ಸಾಮಾಜಿಕ ವ್ಯವಸ್ಥೆ ಅವನ ಸ್ವಇಚ್ಛೆಯಿಲ್ಲದೆ ಭಂಗಗೊಂಡಿದ್ದಾದರೂ ಹೇಗೆ? ಅವನೇ ಸರ್ವಾಂತರ್ಯಾಮಿಯಾಗಿದ್ದು, ಇಂತಹ ವಾಕರಿಕೆ ಬರಿಸುವಂತಹ ವಾತಾವರಣದಲ್ಲಿ ಅವನೇಕೆ ಖುದ್ದು ನಿಂತಿರುವನು? ಈ ಯಾವುದೇ ಪ್ರಶ್ನೆಗಳಿಗೆ ಉತ್ತರಿಸಲು ನಿನ್ನಿಂದಾಗದು. ಪ್ರಸಕ್ತ ಜಾಗತಿಕ ಪದ್ಧತಿಗಳಿಗೆ ಅನುಸಾರ ಹೆಜ್ಜೆ ಹಾಕುವುದನ್ನು ಕಲಿ. ಮೂರ್ಖತನದ ಉದ್ದೇಶಗಳಿಂದ ನಿನಗೇನು ಲಾಭವಾಗದು ಬದಲಿಗೆ ಕುಹಕ, ಖಂಡನೆಗಳಿಗೆ ಗುರಿಯಾಗುವಿ.'

ನನ್ನ ಮಾನಸಿಕ ಸ್ಥಿತಿ ನಾನೀಗ ಹೇಳಲಾರೆ, ಮೂಕಳಾದೆ. ಓ ಸ್ವಾರ್ಥಿ! ಓಹ್ ಭ್ರಮೆಯ ಕಗ್ಗತ್ತಲೇಯೆ! ನಾವೀಗ ಬ್ರಹ್ಮನನ್ನು ಕೂಡ ನಗೆನಾಟಕದ ಪಾತ್ರಧಾರಿಯಾಗಿಸಿರುವೆವು. ನಿಖರವಾದ ಈ ಕ್ಷಣದಲ್ಲಿ ನನ್ನ ಪತಿಯ ಮೇಲಿನ ಭಕ್ತಿ, ಅವನ ಬಗೆಗಿನ ಆರಾಧನಾ ಮನೋಭಾವ ನನ್ನ ಹೃದಯದಿಂದ ಕಣ್ಮರೆಯಾಯಿತು.

ನನಗೀಗ ಈ ಮನೆ ಸೆರೆಮನೆಯಂತೆ ತೋರುತ್ತಿದೆ. ಆದಾಗ್ಯೂ ನಾ ಇನ್ನೂ ಭರವಸೆ ಕಳೆದುಕೊಂಡಿಲ್ಲ. ಇಂದಲ್ಲ ನಾಳೆ, ಬ್ರಹ್ಮನ ಬೆಳಕು ಇಲ್ಲಿ ಖಂಡಿತವಾಗಿಯೂ ಬೆಳಗಿ ಈ ಕಗ್ಗತ್ತಲೆಯನ್ನು ಹೋಗಲಾಡಿಸಲಿದೆ.

●